





ತಲೆಮಾರುಗಳಿಂದ ನಡೆಯುತ್ತಿದ್ದ ಕಲಾದೇವತೆಯ ಆರಾಧನೆ ಜ್ಞಾನೇಶ್ವರ ಅವರನ್ನು ಬಾಲ್ಯದಲ್ಲಿಯೇ ಸಹಜವಾಗಿ ಸೆಳೆದಿದೆ. ತಾತ ಪರಶುರಾಮಪ್ಪ ಅವರಿಂದ ಪ್ರಾಥಮಿಕ ತರಬೇತಿ ಪಡೆಯುವ ಮೂಲಕ ಅವರಿಗೆ ಮನೆಯೇ ಮೊದಲ ಪಾಠಶಾಲೆಯಾಯಿತು. ಕಲೆಯ ಪಾಠದೊಂದಿಗೆ ಶಾಲಾ ವಿದ್ಯಾಭ್ಯಾಸ ಶಿಕಾರಿಪುರದಲ್ಲಿ ನಡೆಯಿತು. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತಾಲ್ಲೂಕಿಗೇ ಪ್ರಥಮ ಶ್ರೇಣಿಯಲ್ಲಿ ಪಾಸಾದರು. ಮನೆಯವರ ಪ್ರೋತ್ಸಾಹದೊಂದಿಗೆ 1975ರಲ್ಲಿ ಹುಬ್ಬಳ್ಳಿಯ ಪಿ.ಸಿ. ಜಾಬಿನ್ ಕಾಲೇಜಿನಿಂದ ರಸಾಯನ ವಿಜ್ಞಾನದಲ್ಲಿ ಬಿ.ಎಸ್ಸಿ ಪದವಿ ಪಡೆದರು. ಹೀಗಿದ್ದರೂ ಅವರ ಅಂತರಾತ್ಮ ಕಲೆಯ ಕರೆಗೇ ಓಗೊಡುತ್ತಿತ್ತು.

ಕಲೆಯನ್ನು ಶಾಸ್ತ್ರೋಕ್ತವಾಗಿ ಕಲಿಯಲಿಚ್ಛಿಸಿದ ಜ್ಞಾನೇಶ್ವರರು ಹುಬ್ಬಳ್ಳಿಯ 'ವಿಜಯ ಮಹಾಂತೇಶ ಕಲಾಮಂದಿರ'ದಲ್ಲಿ ಅಧ್ಯಯನ ಆರಂಭಿಸಿದರು. ಅಲ್ಲಿ ಅವರಲ್ಲಿ ಸುಪ್ತವಾಗಿದ್ದ ಕಲೆಗೆ ಹೊಸ ರೂಪ ಹಾಗೂ ಸ್ಪಷ್ಟತೆ ದೊರೆಯಿತು. ತಿಂಗಳ ಸಂಬಳ ತರುವ ಸುಖದ ಜೀವನ ಒಂದೆಡೆ, ಮತ್ತೊಂದೆಡೆ ಆತ್ಮತೃಪ್ತಿ ನೀಡುವ ಕಲಾರಾಧನೆ – ಇವುಗಳಲ್ಲಿ ಜ್ಞಾನೇಶ್ವರರು ಆಯ್ದುಕೊಂಡಿದ್ದು ಕಲಾದೇವಿಯ ಉಪಾಸನೆಯನ್ನು.

ಕಲಾಜೀವನದಲ್ಲಿ ಎದುರಾದ ಸವಾಲುಗಳನ್ನು ಅವರು ಶ್ರದ್ಧೆಯಿಂದ ನಿಭಾಯಿಸಿದರು. ಇದರ ಪರಿಣಾಮವಾಗಿ ಅವರ ಕಲಾಕೃತಿಗಳು ದೇಶ ವಿದೇಶಗಳಲ್ಲಿ ಇಂದಿಗೂ ಜನಮನ್ನಣೆ ಪಡೆಯುತ್ತಲೇ ಇವೆ. ಶಿವಮೊಗ್ಗದ ಶಂಕರಮಠದಲ್ಲಿ ಚಿತ್ರಿಸಿದ ಶಂಕರಾಚಾರ್ಯರ ಜೀವನ ಚರಿತ್ರೆ, ನ್ಯಾಷನಲ್ ಎಂಜಿನಿಯರಿಂಗ್ ಕಾಲೇಜಿಗೆ ರಚಿಸಿಕೊಟ್ಟ ಗಾಂಧೀಜಿ ಹಾಗೂ ಪಂಡಿತ್ ನೆಹರೂ ಅವರ ಚಿತ್ರ, ದಿವಂಗತ ನಾಗಪ್ಪ ಶೆಟ್ಟಿ ಅವರ ಚಿತ್ರ, ಕರ್ನಾಟಕ ಸಂಘದ ಮ್ಯೂರಲ್ ರಚನೆ, ಚಿನ್ಮಯ ಮಿಷನ್‌ಗೆ ಚಿತ್ರಿಸಿದ ಚಿನ್ಮಯಾನಂದರ ಹಾಗೂ ತಪೋವನ ಮಹಾರಾಜರ ಚಿತ್ರಗಳು – ಇವು ಜ್ಞಾನೇಶ್ವರರ ಕಲಾಭಿವ್ಯಕ್ತಿಯ ಕೆಲವು ಉದಾಹರಣೆಗಳಷ್ಟೆ.

1976ರಲ್ಲಿ ಶಿವಮೊಗ್ಗದಲ್ಲಿ ನಡೆದ 49ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಜ್ಞಾನೇಶ್ವರರ ಕಲಾಕೃತಿಗಳು ಮೆರುಗು ತಂದುಕೊಟ್ಟಿದ್ದವು. ಆ ಕಲಾಕೃತಿಗಳನ್ನು ನೋಡಿ ಅಪಾರವಾಗಿ ಮೆಚ್ಚಿದ ಅಂದಿನ ಮುಖ್ಯಮಂತ್ರಿ ದೇವರಾಜ ಅರಸು ಅವರು ಜ್ಞಾನೇಶ್ವರ ಅವರನ್ನು ಸನ್ಮಾನಿಸಿದ್ದರು.

ಜ್ಞಾನೇಶ್ವರರು ರಚಿಸಿದ ಪ್ರಮುಖ ಶಿಲ್ಪಗಳಲ್ಲಿ – ಮತ್ತೂರಿನ ಮಾರ್ಕಂಡೇಯ ಅವಧಾನಿಗಳ ಗಣಪತಿ ಗುಡ್ಡಕ್ಕೆ ನಿರ್ಮಿಸಿಕೊಟ್ಟಿರುವ 65 ಅಡಿಯ ಅನಂತಶಯನ ವಿಗ್ರಹ, ಅಮೆರಿಕದ ನ್ಯೂಜರ್ಸಿಯ ಚಿನ್ಮಯ ಮಿಷನ್‌ಗೆ ಕೆತ್ತಿಕೊಟ್ಟಿರುವ 4 ಅಡಿ ಎತ್ತರದ ರಾಧಾಕೃಷ್ಣ ವಿಗ್ರಹ, ಅದೇ ಟ್ರಸ್ಟ್‌ಗೆ ನಿರ್ಮಿಸಿಕೊಟ್ಟಿರುವ ಗಣಪತಿ ಹಾಗೂ ವೆಂಕಟೇಶ್ವರ ವಿಗ್ರಹ, ಶಿವಮೊಗ್ಗದ ನಿಮಿಷಾಂಬಾದೇವಿ, ಗಂಗಾಪರಮೇಶ್ವರಿ, ಭಾರತ ಫೌಂಡ್ರಿಯ ಎದುರಿನ ಆಂಜನೇಯ, ಭದ್ರಾವತಿ ಬುಳ್ಳಾಪುರದ ಆಂಜನೇಯ, ಹುಬ್ಬಳ್ಳಿಯ ನಿಮಿಷಾಂಬಾದೇವಿ, ಕೊಯಮತ್ತೂರಿನ ದಕ್ಷಿಣಾಮೂರ್ತಿ ಶಿಲೆಯ ಶಾರದೆ, ಮಧುರೈ ಶಾರದೆ ಮೂರ್ತಿ... ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಜ್ಞಾನೇಶ್ವರರ ಕಲಾರಾಧನೆಯ ಸ್ಫೂರ್ತಿ ಹಾಗೂ ಅಂತಃಶಕ್ತಿ ಅವರ ಧರ್ಮಪತ್ನಿ ಗಿರಿಜಾ ಜ್ಞಾನೇಶ್ವರ. ಶಿವಮೊಗ್ಗದ ಹಿರಿಯ ವಕೀಲ ಟಿ. ವೆಂಕಟರಮಣಶಾಸ್ತ್ರಿ ಅವರು ತಮ್ಮ ಗಾಡ್‌ಫಾದರ್ ಎಂದು ಜ್ಞಾನೇಶ್ವರರು ನೆನೆಯುತ್ತಾರೆ.

ಪ್ರಸ್ತುತ 70ನೇ ವರ್ಷಕ್ಕೆ ಕಾಲಿಟ್ಟಿರುವ ಜ್ಞಾನೇಶ್ವರ ಅವರಿಗೆ ಮೂವರು ಪುತ್ರರು. 'ಕಲಾಕುಂಜ್' ಎಂಬ ಅವರ ಮನೆಯೇ ಪುಟ್ಟ ವಸ್ತುಸಂಗ್ರಹಾಲಯದಂತಿದೆ. ವರ್ಣಚಿತ್ರ ಹಾಗೂ ಶಿಲ್ಪಕಲೆಗಳಿಂದ ಆ ಮನೆ ಸಹೃದಯರ ಕಣ್ಮನ ಸೆಳೆಯುತ್ತದೆ. ಶಿಲ್ಪಕಲೆ ಮಾತ್ರವಲ್ಲದೇ ಜ್ಞಾನೇಶ್ವರರು ಶಾಸ್ತ್ರೀಯ ಸಂಗೀತದ ಆರಾಧಕರೂ ಹೌದು. ಸಾಹಿತ್ಯ, ವಾಸ್ತುಶಿಲ್ಪಗಳ ಅಧ್ಯಯನ ಅವರ ಹವ್ಯಾಸ.

ಕಳೆದ ನಾಲ್ಕೂವರೆ ದಶಕಗಳಿಂದ ಕಲೆಯನ್ನು ಆರಾಧಿಸುತ್ತಲೇ ಬಂದ ಜ್ಞಾನೇಶ್ವರ ಅವರಿಗೆ ಹಲವಾರು ಪ್ರಶಸ್ತಿಗಳು ಸಂದಿವೆ. 'ಶಿಲ್ಪಕಲಾ ಕೋವಿದ' ಪ್ರಶಸ್ತಿ, ಶಿಲ್ಪಕಲಾ ಅಕಾಡೆಮಿ ಪ್ರಶಸ್ತಿ, 2019ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ಅವರಿಗೆ ಸಂದ ಗೌರವಗಳಲ್ಲಿ ಕೆಲವು.

'ಡಿಜಿಟಲ್ ಯುಗದಲ್ಲಿ ಕಲಾಭಿರುಚಿ ಕ್ಷೀಣಿಸುತ್ತಿದೆ. ನಕಲು ಮಾಡುವ ವಿಕೃತಿ, ಕೃತಿಚೌರ್ಯದದ ವಂಚನೆ ಹೆಚ್ಚಿದೆ. ಚಿರಕಾಲ ಉಳಿಯುವಂತಹ ಕಲೆಯನ್ನು ತಮ್ಮ ಕಾಯಕವನ್ನಾಗಿಸಿಕೊಳ್ಳುವಲ್ಲಿ ಯುವಕರು ಹಿಂದೇಟು ಹಾಕುತ್ತಿದ್ದಾರೆ' ಎನ್ನುವುದು ಜ್ಞಾನೇಶ್ವರ ಅವರ ಬೇಸರ. ಅದಕ್ಕೆ ಉತ್ತರ ಎನ್ನುವಂತೆ ಅವರ ಪುತ್ರ ಕೆ. ಪ್ರವೀಣ್ ಕುಟುಂಬದ ಪಾರಂಪರಿಕ ಕಲಾರಾಧನೆಯನ್ನು ಮುಂದುವರಿಸಿದ್ದಾರೆ. ಮತ್ತೊಬ್ಬ ಪುತ್ರ ಕೆ. ಪ್ರಸಾದ್ ಶಸ್ತ್ರಚಿಕಿತ್ಸಾ ತಜ್ಞರಾದರೂ ಕಲೆಯ ನಂಟು ಬಿಟ್ಟಿಲ್ಲ.